ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (325)327
ಸದಸ್ಯರ ಹೆಸರು : ಶ್ರೀ ರಾಮಸ್ವಾಮಿಗೌಡ ಬಿ.ಬಿ
ವಿಷಯ : ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ಅನುದಾನ ಹೆಚ್ಚಿಸುವುದು.
ಉತ್ತರಿಸುವ ಸಚಿವರು : (ಶ್ರೀ.ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
: ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರ, ಪೂಜಾ ಕೈಂಕರ್ಯ ಹಾಗೂ ಅಭಿವೃದ್ಧಿಗಾಗಿ 2008–09ನೇ ಸಾಲಿಗೆ ಸರ್ಕಾರ ಒದಗಿಸಿರುವ ಅನುದಾನವೆಷ್ಟು;

ಮುಜರಾಯಿ ಇಲಾಖಾ ಯೋಜನೆಯಡಿ ಜೀರ್ಣೋದ್ಧಾರ/ ನವೀಕರಣ ಯೋಜನೆಗಾಗಿ ಆಯವ್ಯಯದಲ್ಲಿ ಒದಗಿಸಲಾದ ಅನುದಾನವನ್ನು ರಾಜ್ಯದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಿ, ಸರ್ಕಾರದಿಂದ ಅನುದಾನ ಮಂಜೂರು ಮಾಡಲು ಕೋರಿ ಬಂದಂತಹ ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ಮಂಜೂರು ಮಾಡಲಾಗುತ್ತದೆ. ಈ ಯೋಜನೆ ಅಡಿ ಯಾವುದೇ ವಿಧಾನ ಸಭಾ ಕ್ಷೇತ್ರಕ್ಕೆ ಇಂತಿಷ್ಟು ಮೊತ್ತ ಎಂದು ನಿಗಧಿಪಡಿಸಲಾಗುವುದಿಲ್ಲ.

2008–09ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ರೂ.880.00 ಲಕ್ಷ ಅನುದಾನ ಒದಗಿಸಲಾಗಿದ್ದು, ಈ ಮೊತ್ತದಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ. 3.92,857.14/– ಗಳನ್ನು ವಿಧಾನ ಸಭಾ ಕ್ಷೇತ್ರವಾರು ಮಂಜೂರು ಮಾಡಲಾಗುವುದು.

ತದನಂತರ 2008–09ನೇ ಸಾಲಿನ ಮುಂಗಡ ಪತ್ರದಲ್ಲಿ ಆರಾಧನಾ ಮತ್ತು ಸಂಬಂಧಿತ ಯೋಜನೆಯಡಿ ಧಾರ್ಮಿಕ ಮತ್ತು ದತ್ತಿ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ರೂ. 29.00 ಕೋಟಿಗಳನ್ನು ಮೀಸಲಿಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ನಿರ್ಧರಿಸಲಾದ ಮೊತ್ತದಲ್ಲಿ ಆರಾಧನಾ ಯೋಜನೆಗಾಗಿ ಆರ್ಥಿಕ ಇಲಾಖೆಯು ಅಳವಡಿಸುವ ಮೊತ್ತವನ್ನು ಸಹ ವಿಧಾನ ಸಭಾ ಕ್ಷೇತ್ರವಾರು ಸಮನಾಗಿ ಹಂಚಿಕೆ ಮಾಡಲಾಗುವುದು.

ಆ) ಅಗತ್ಯತೆಗಿಂತ ಕಡಿಮೆ ಪ್ರಮಾಣದಲ್ಲಿರುವ ಅನುದಾನಗಳನ್ನು ಹೆಚ್ಚು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಕಳೆದ ಸಾಲಿನಲ್ಲಿ ಒದಗಿಸಲಾದ ಅನುದಾನ ಪ್ರಮಾಣಕ್ಕಿಂತ ಪ್ರಸ್ತುತ ಸಾಲಿನಲ್ಲಿ ಹೆಚ್ಚಿಗೆ ಪ್ರಮಾಣದ ಅನುದಾನ ಒದಗಿಸಿರುತ್ತದೆ. ವಿವರ ಈ ಕೆಳಕಂಡಂತೆ ಇದೆ:–

2007–08ನೇ ಸಾಲಿನಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರ / ನವೀಕರಣ ಕಾಮಗಾರಿಗಳಿಗಾಗಿ ರೂ. 26,66,60,000.00ಗಳನ್ನು ಬಿಡುಗಡೆ ಮಾಡಲಾಗಿದೆ.

2007–08ನೇ ಸಾಲಿನ ಆರಾಧನಾ ಯೋಜನೆಯಡಿಯಲ್ಲಿ ರೂ. 22.40 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

2008–09ನೇ ಸಾಲಿನಲ್ಲಿ ಜೀರ್ಣೋದ್ಧಾರ / ನವೀಕರಣ ಉದ್ದೇಶಕ್ಕಾಗಿ ಆಯವ್ಯಯದಲ್ಲಿ ರೂ. 1967.00 ಲಕ್ಷಗಳನ್ನು ಒದಗಿಸಿದೆ.

2008–09ನೇ ಸಾಲಿನ ಆರಾಧನಾ ಯೋಜನೆಯಡಿಯಲ್ಲಿ ರೂ. 880.00 ಲಕ್ಷಗಳನ್ನು ಒದಗಿಸಿದೆ.

ತದನಂತರ 2008–09ನೇ ಸಾಲಿನ ಮುಂಗಡ ಪತ್ರದಲ್ಲಿ ಆರಾಧನಾ ಮತ್ತು ಸಂಬಂಧಿತ ಯೋಜನೆಯಡಿ ಧಾರ್ಮಿಕ ಮತ್ತು ದತ್ತಿ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ರೂ. 29.00 ಕೋಟಿಗಳನ್ನು ಮೀಸಲಿಡಲು ಸರ್ಕಾರವು ನಿರ್ಧರಿಸಿರುತ್ತದೆ.

ಚುಕ್ಕೆರಹಿತ ಪ್ರಶ್ನೆ ಸಂಖ್ಯೆ : (178)328
ಸದಸ್ಯರ ಹೆಸರು : ಶ್ರೀ ಸಂಪಂಗಿ.ಎನ್ (ಬಾಗೇಪಲ್ಲಿ)
: (ಶ್ರೀ ಶೋಭಾ ಕರಂದ್ಲಾಜೆ)

ಅ ಗುಡಿಬಂಡೆ ತಾಲ್ಲೂಕಿನಲ್ಲಿ ಶುದ್ಧ ಕುಡಿಯುವ ನೀರಿನ ಕೊರತೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಪರಿಣಾಮವಾಗಿ ರೈತರು/ನಾಗರಿಕರು ಫ್ಲೋರೈಡ್ ಅಂಶ ಹೊಂದಿರುವ ನೀರನ್ನು ಕುಡಿದು ಕೈಕಾಲುಗಳ ಸ್ವಾಧೀನತೆಯನ್ನು ಕಳೆದುಕೊಳ್ಳುತ್ತಿರುವ ವಿಚಾರ ನಿಜವಲ್ಲವೆ;

ಆ ಹಾಗಿದ್ದಲ್ಲಿ, ಫ್ಲೋರೈಡ್ ಅಂಶ ಹೊಂದಿರುವ ನೀರನ್ನು ಕುಡಿದು ಕೈಕಾಲುಗಳ ಸ್ವಾಧೀನತೆಯನ್ನು ಕಳೆದುಕೊಂಡು ಬಳಲುತ್ತಿರುವ ರೈತರು/ನಾಗರಿಕರ ಸಂಖ್ಯೆ ಎಷ್ಟು;

ಗುಡಿಬಂಡೆ ತಾಲ್ಲೂಕಿನಲ್ಲಿ ಅಧಿಕ ಫ್ಲೋರೈಡ್ ಅಂಶವಿರುವ ನೀರು ಸೇವನೆಯಿಂದ ಡೆಂಟಲ್ ಮತ್ತು ಸ್ಕೆಲೆಟಿಲ್ ಫ್ಲೋರೋಸಿಸ್ ಕಾಯಿಲೆಯಿಂದ ಜನರು ಬಳಲುತ್ತಿರುವುದು ನಿಜ.

ಇ ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕಿನಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಸರ್ಕಾರವು ಒದಗಿಸಿಕೊಡಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಈ ನೀರಿನಲ್ಲಿರುವ ಫ್ಲೋರೈಡ್ ಅಂಶವನ್ನು ಹೋಗಲಾಡಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು;

ಉ ಈ ಭಾಗದ ಜನರಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳ 128 ಗ್ರಾಮಗಳಿಗೆ ಪರಗೋಡು ಜಲಾಶಯದ ನೀರನ್ನು ಶುದ್ಧೀಕರಿಸಿ ಶಾಶ್ವತ ಕುಡಿಯುವ ನೀರಿನ